ಕಾರ್ಯವೆಲ್ಲ ಮುಗಿದ ಮೇಲೆ, "ಹರೆಯದ ಹುಡುಗಿಯನ್ನ ಕಟ್ಟಿಕೊಂಡು ಇಲ್ಲಿದ್ದು ಏನು ಮಾಡ್ತೀಯಾ? ನನ್ನ ಜೊತೆ ಬಾ" ಎಂದು ಕರೆದ ಅಂಜನಪ್ಪ. ದೇವಮ್ಮನಿಗಿದ್ದುದು ಅದೊಂದೇ ಆಸರೆ. ಬೇರೆ ದಾರಿ ಕಾಣಲಿಲ್ಲ. ವಿಪರೀತ ಕೆಲಸದ ಜೊತೆ ಗಂಡನ ಕಾಯಿಲೆಯೂ ಸೇರಿ ಅವಳು ಹಣ್ಣಾಗಿದ್ದಳು. ಆಗಾಗ ಎದೆನೋವು ಕಾಣಿಸಿಕೊಂಡರೂ ಯಾರಲ್ಲೂ ಬಾಯ್ಬಿಡಲಿಲ್ಲ. ಇದ್ದೊಬ್ಬ ಬೊಂಬೆಯಂಥ ಮಗಳನ್ನು ತಮ್ಮನ ಮಡಿಲಿಗೆ ಹಾಕಿದರಾಯಿತೆಂಬ ಮುಂಜಾಗರೂಕತೆಯಿಂದಲೇ ಅವಳು ಗಂಟು, ಮೂಟೆ ಕಟ್ಟಿದ್ದು. ಪ್ರೇಮಿಗಳನ್ನು ಸೇರಿಸಿದ ಬಾವಿಕಟ್ಟೆ ಈಗ ಅವರ ಅಗಲಿಕೆಗೂ ಸಾಕ್ಷಿಯಾಯಿತು. "ನನ್ನ ಮರೀಬೇಡ..." ಎಂದು ಕಣ್ಣೀರಿಟ್ಟ ನಾಗುವಿನ ಕೈ ಹಿಡಿದು ಪ್ರಕಾಶ, "ಅಪ್ಪನನ್ನು ಈ ಸ್ಥಿತಿಯಲ್ಲಿ ಬಿಟ್ಟು ಎಲ್ಲಿಗೂ ಬರುವ ಹಾಗಿಲ್ಲ. ಅಲ್ದೇ ಈ ಧಣಿಗಳನ್ನೂ ನಂಬೋಕಾಗೋಲ್ಲ. ನಮ್ದೂ ಅಂತ ಒಂದು ಅಂಗೈ ಅಗಲಾನಾರೂ ಜಮೀನು ಮಾಡ್ಕೊಂಡು ಬರ್ತೀನಿ ನಿನ್ನ ಮದ್ವೆಯಾಗೋಕೆ. ಅಲ್ಲೀಗಂಟ ತಾಳ್ಕೊ. ಒಂದೆರೆಡು ವರ್ಷಗಳಷ್ಟೇ..." ಎಂದು ಸಂತೈಸಿದ. ಇಬ್ಬರ ದಾರಿಗಳೂ ಬೇರೆಯಾದವು. ಬದುಕು ತೋರಿಸಿದ ಕವಲು ದಾರಿಯಲ್ಲಿ ತಾಯಿಮಗಳಿಬ್ಬರೂ ಮೌನವಾಗಿ ನಡೆದರು. ಹೂವಿಲ್ಲದ ಹಾದಿಯಲ್ಲಿ... ಮೃಗಗಳಿಲ್ಲವೆಂಬ ಭರವಸೆಯಲ್ಲಿ...

ಅಂಜನಪ್ಪನ ಹೆಂಡತಿ ಮಾಂಕಾಳಮ್ಮ ಒಳ್ಳೆಯವಳೇ. ದುಡಿಯಲು ಬಂದ ನಾಲ್ಕು ಕೈಗಳನ್ನು ಬೇಡವೆನ್ನಲಿಲ್ಲ, ಸಂತೈಸಿದಳು. ಅಂಜನಪ್ಪ ಮದ್ರಾಸಿನ ಸಿನಿಮಾ ಸ್ಟುಡಿಯೋ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಅಲ್ಲಿಯೇ ಮನೆ ಎಂಬ ಹೆಸರಿನ ಗೂಡು. ಪುಟ್ಟ ಪುಟ್ಟ ಮೂರು ಮಕ್ಕಳು. ಸ್ಟುಡಿಯೋ ಗುಡಿಸುವುದರಿಂದ ಮೊದಲಾಗಿ ಎಲ್ಲ ಕೆಲಸ ಇವರದೇ. ಬೇಕಾದ ಸೆಟ್ ಹಾಕುವದು, ಅಲಂಕರಿಸುವದು, ಟೀ, ಕಾಫಿ, ಬಿಸ್ಕೆಟ್, ಆಮ್ಲೆಟ್, ಬ್ರೆಡ್ ಪೂರೈಸುವದೂ ಅದರಲ್ಲೇ ಸೇರಿತ್ತು. ಅಂಜನಪ್ಪ 'ಪೆಸಲ್ ಕೆ.ಟಿ.' ಎಂದು ಕೂಗಿದರೆ ಗಟ್ಟಿ ಹಾಲಿನಲ್ಲಿ ಟೀ ಮಾಡುವುದು. ಇಲ್ಲವಾದಲ್ಲಿ ನೀರು ಸೇರಿಸಿ ಟೀ ಎಂಬ ಹೆಸರಿನ ದ್ರವ ಕೊಡುವುದು. ಕಾಫಿಗೂ ಇದೇ ಗತಿಯೇ. ಪ್ರಕಾಶನನ್ನು ಮನದಲ್ಲಿಟ್ಟುಕೊಂಡ ನಾಗು ಬಿಡುವಿಲ್ಲದ ಕೆಲಸಗಳಲ್ಲಿ ಲೀನವಾದಳು. ಬಂದಾಕ್ಷಣ ದೇವಮ್ಮ ಟೀ, ಕಾಫಿಗೆ ನಿಂತುಬಿಟ್ಟಳು. ಎದೆನೋವೆಂದರೆ ಮಾಂಕಾಳಮ್ಮ ಏನೆನ್ನುವಳೋ... ಇದ್ದ ಆಸರೆಯೂ ತಪ್ಪಿದರೆ ಮುಂದೆ ಮಗಳ ಗತಿ?... ಒಲೆಯ ಮುಂದೆ ಕುಳಿತಳು ನೋಯುತ್ತ... ಬೇಯುತ್ತ... ಕಾಯುತ್ತ...

ಆದರೆ ಕಾಲ ಕಾಯಲಿಲ್ಲ. ಎರಡೇ ತಿಂಗಳಲ್ಲಿ ಬಚ್ಚಿಟ್ಟುಕೊಂಡ ನೋವು ಸ್ಫೋಟಿಸಿತು. ಒಲೆಯ ಮುಂದೇ ಉರುಳಿದಳು ದೇವಮ್ಮ ಟೀ ಪಾತ್ರೆಯೊಂದಿಗೆ... ಕೂಗಿದ್ದೊಂದೇ ಶಬ್ದ "ನಾಗೂ..." ಮಗಳು ಬರುವವರೆಗೂ ಅವಳ ಪ್ರಾಣಪಕ್ಷಿ ಕಾಯಲಿಲ್ಲ. ಡಾಕ್ಟ್ರು "ಹಾರ್ಟ ಅಟ್ಯಾಕ್" ಎಂದರು. ನಾಗುವಿಗೆ ದೊಡ್ಡ ಆಘಾತ. ಇನ್ನೂ ಅಪ್ಪನಿಗಾಗಿ ಅಳುವುದೇ ಮುಗಿದಿರಲಿಲ್ಲ. ಅಷ್ಟರಲ್ಲಿ ಅಮ್ಮನ ಅಗಲಿಕೆಯೂ ಸೇರಿತು. ಪ್ರಕಾಶನ ಸುಳಿವಿಲ್ಲ. ಫೋನಂತೂ ಇವರ ಬಳಿ ಇರಲೇ ಇಲ್ಲ. ಪತ್ರವೂ ಇಲ್ಲ. ಪತ್ರ ಬರಲು ಇವಳು ವಿಳಾಸವಾದರೂ ಕೊಟ್ಟದ್ದೆಲ್ಲಿ? ದಿಕ್ಕು ತಪ್ಪಿದ ಹಕ್ಕಿಯಂತೆ ನಿಂತುಬಿಟ್ಟಳು ರೋದಿಸುತ್ತ... ಮಾಂಕಾಳಮ್ಮ ಅಪ್ಪಿ ಸಂತೈಸಿದಳು. ಅಂಜನಪ್ಪ ಕೂಡ, "ಆಸ್ಪತ್ರೆಗೆ ತೋರ್ಸಾಕೂ ಪುರುಸೊತ್ತು ಕೊಡಲಿಲ್ಲ. ದ್ಯಾವ್ರು ಅಕ್ಕನ್ನ ಎತ್ಕೊಂಡೇ ಹೋದ" ಎಂದು ದೊಡ್ಡ ಧ್ವನಿ ತೆಗೆದು ಅತ್ತ.

ಮತ್ತೆ ಬೆಳಗಾಯಿತು. ಚಕ್ರ ತಿರುಗಿತು. ಸೆರಗು ಕಟ್ಟಿ ಕೆಲಸಕ್ಕೆ ನಿಂತಳು ನಾಗು. ತಮಿಳು, ತೆಲುಗು, ಕನ್ನಡ ಯಾವ ಚಿತ್ರಗಳ ಶೂಟಿಂಗ್ ಇದ್ದರೂ ಮನೆಗಳ ಸೆಟ್ ಅಂತೂ ಹಾಕುತ್ತಿದ್ದರು.